Reg.No. M. 1550.
KODAGU" MERCARA, (Coorg)

ಕೊಡಗು

ಸಂಪಾದಕರು: ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೪-೮-೦.

ಸಂಪುಟ ೨೩ | ತಾರೀಕು ೨೦—೪—೧೯೪೪ನೇ ಶುಕ್ರವಾರ. | ಸಂಚಿಕೆ ೪೫

ವಧೂವರರಿಗೆ ಗಾಂಧೀಜಿಯ ಸಂದೇಶ.

— ಬರೆದವರು:—ಮಾ. ಗಾಂಧಿ. —

ನಮ್ಮನ್ನು ಕರ್ತವ್ಯ ಪರಾಯಣರನ್ನಾಗಿ ಮಾಡಿದ ಯಾವ ಸಮಾರಂಭಗಳಲ್ಲೂ ನನಗೆ ನಂಬಿಕೆ ಇಲ್ಲ. ನಾನು ಸ್ವಂತವಾಗಿ ವಿಚಾರ ಮಾಡಲು ಸಮರ್ಥನಾದಂದಿನಿಂದ ನನ್ನಲ್ಲಿ ಈ ಅಭಿಪ್ರಾಯವುಂಟಾಗಿದೆ. ಸಮಾರಂಭಗಳಲ್ಲಿ ಉಪಯೋಗಿಸಲ್ಪಡುವ ಮಂತ್ರಗಳೆಲ್ಲವೂ ಸಂಸ್ಕೃತದಲ್ಲಿವೆ. ಅವುಗಳ ಅರ್ಥವನ್ನು ನಾವು ಸ್ಪಷ್ಟವಾಗಿ ತಿಳಿಕೊಳ್ಳಲು ಪ್ರಯತ್ನಿಸಬೇಕು. ಸಂಸ್ಕೃತದ ಪ್ರತಿಯೊಂದು ಶಬ್ದದಲ್ಲೂ ಮನನೋಹಕವಾದ ಆಕರ್ಷಣೆಯೊಂದಿದೆ.

ಲಗ್ನ ಸಮಾರಂಭವಲ್ಲಿ ಉಪಯೋಗಿಸಲ್ಪಡುವ ಒಂದು ಶ್ಲೋಕದಲ್ಲಿ ಗಂಡನು ತನ್ನ ಪತ್ನಿಯು ಆರೋಗ್ಯವಂತನೂ ಗುಣವಂತನೂ ಆದ ಮಗನನ್ನು ಪಡೆಯಲೆಂದು ಹಾರೈಸುತ್ತಾನೆ. ಇದು ಯೋಗ್ಯವಾದ ಹಾರೈಕೆಯು. ಮಗುವನ್ನು ಪಡೆಯಬೇಕೆಂಬ ಉದ್ದೇಶವಿದ್ದರೆ ಶುದ್ಧ ಶಾಸ್ತ್ರೋಕ್ತ ರೀತಿ ಭಾವದಲ್ಲಿ ನೆರವೇರಿಸಲ್ಪಡುವ ವಿವಾಹವು ಅತ್ಯವಶಕ. ಲೈಂಗಿಕ ತೃಪ್ತಿಗಾಗಿ ಮಾಡಿಕೊಳ್ಳಲ್ಪಡುವ ವಿವಾಹವು ಎಂದಿಗೂ ವಿವಾಹವೆನಿಸದು. ಅದು ವ್ಯಭಿಚಾರವೆಂದೆನಿಸುವುದು. ಅದು ಕಾಮೇಚ್ಛೆ ಪ್ರಧಾನವಾದುದು. ವಿವಾಹಮಾಡಿಕೊಳ್ಳುವ ಇಚ್ಛಾರಲ್ಲಿ ಮಗುವನ್ನು ಪಡೆಯಬೇಕೆಂಬ ಸದುದ್ದೇಶವಿದ್ದಲ್ಲಿ ಮಾತ್ರ ಲೈಂಗೀಕ ವ್ಯವಹಾರವು ನೈತೀಕವಾಗುವುದು. ಇದು ಪರಮ ಪವಿತ್ರವಾದ ಭಾವನೆಯು. ಆದುದರಿಂದ ಅಂತಹ ಕಾರ್ಯವನ್ನು ಪ್ರಾರ್ಥನಾಪೂರ್ವಕವಾಗಿ ನೆರವೇರಿಸಬೇಕಾದುದು ಅತ್ಯಾವಶ್ಯಕ.

ಶಾರೀರಿಕವಾಗಿಯೂ ಮಾನಸಿಕ ನೈತಿಕವಾಗಿಯೂ ಆರೋಗ್ಯವಂತರಾಗಿ ಇರದವರಿಬ್ಬರು ಎಂದೂ ಲಗ್ನಬಂಧನದಲ್ಲಿ ಒಟ್ಟುಗೂಡಬಾರದು. ಅದು ವ್ಯಭಿಚಾರವೆನಿಸುವುದು. ಕಾಮೇಚ್ಛೆಯೇ ಅದರ ಮೂಲ. ನಮ್ಮಲ್ಲಿನ ಮೃಗೀಯ ಕೋರಿಕೆಗಳನ್ನು ತೃಪ್ತಿಪಡಿಸುವುದಕ್ಕಾಗಿ ಮದುವೆ ಮಾಡಿಕೊಳ್ಳುವುದೆಂಬ ಪುರಾತನ ಅಭಿಪ್ರಾಯಗಳನ್ನು ನಾವು ಕಿತ್ತೊಗೆಯಬೇಕು. ಅದು ಕೇವಲ ಮೂಢ ನಂಬಿಕೆ. ಲಗ್ನ ಸಮಾರಂಭವು ಅಗ್ನಿಯು ಮುಂಪೆ ಜರಗಿಸಲ್ಪಡುವುದು. ಆ ಪವಿತ್ರವಾದ ಬೆಂಕಿಯು ನಮ್ಮಲ್ಲಿನ ಕಾಮ ಕೋರಿಕೆಗಳನ್ನು ಸುಟ್ಟು ಹಾಕಲಿ.

ಸಂಯಮನದ ತಾಳಿ ಲೈಂಗೀಕ ವ್ಯವಹಾರದಿಂದ ದೂರವಿರುವುದು ಆಸ್ವಾಭಾವಿಕವಾದುದೆಂಬ ಮೂಢ ನಂಬಿಕೆಯು ನಮ್ಮ ಕೆಲವರಲ್ಲಿ ಬೇರೂರಿದೆ. ಇದಕ್ಕಿಂತಲೂ ಹೆಚ್ಚಿನ ಆತ್ಮನಾಶಕವಾದ ಮೂಢ ನಂಬಿಕೆ ಬೇರೆ ಇಲ್ಲ. ನಿಮ್ಮ ಮನಸ್ಸುಗಳು ದುರ್ಬಲವಾಗಿರುತ್ತವೆಂಬ ಮಾತ್ರಕ್ಕೆ ಬ್ರಹ್ಮಚರ್ಯದ ಪವಿತ್ರತೆಯನ್ನು ಕೀಳು ಮಾಡಬೇಡಿರಿ. ಅಪವಿತ್ರತೆಯನ್ನು ಪವಿತ್ರತೆಯನ್ನಾಗಿ ಭಾವಿಸದಿರಿ. ಲೈಂಗೀಕ ವ್ಯವಹಾರವನ್ನು ಸ್ವಿಮಿತವಲ್ಲಿಟ್ಟುಕೊಳ್ಳುವುದೇ ನಿಜವಾದ ಮದುವೆಯ ಉದ್ದೇಶವಾಗಿರುತ್ತದೆ. ಇನ್ನರ ಹೊರತಾಗಿ ಮದುವೆಯ ಉದ್ದೇಶಗಳು ಬೇರೆ ಇದ್ದರೆ ಅದಕ್ಕೆ ಪವಿತ್ರತೆ ಇಲ್ಲವೇ ಇಲ್ಲ.

ನೀವು ವಿವಾಹದಲ್ಲಿ ಬಂಧಿತರಾಗುವುದು ಸಮಾನ ಸ್ನೇಹಿತರಾಗಿ. ಪತಿಯು ಸ್ವಾಮಿಯೂ ಪತ್ನಿಯು ಸ್ವಾಮಿನಿಯೇ ಸರಿ. ಒಬ್ಬರು ಇನ್ನೊಬ್ಬರ ಯಜಮಾನರು, ಒಬ್ಬರು ಇನ್ನೊಬ್ಬರ ಸಹಾಯಕರು ಮತ್ತು ಜೀವನ ಪಾಲಗಾರರು.

ಗಂಡಂದಿರಲ್ಲಿ ಹೆಚ್ಚಿನ ವಿವೇಕವಿದ್ದರೆ ಅವರು ತಮ್ಮ ಅರ್ಧಾಂಗಿಯಲ್ಲಿ ಅದನ್ನು ತುಂಬಲು ಪ್ರಯತ್ನಿಸಬೇಕು. ನಿಜವಾದ ಗುರುಗಳು ಸಹಾಯಮಾಡುವವರಲ್ಲದೆ ಸಂಕಸ್ಪವನ್ನುಂಟುಮಾಡುವವರಲ್ಲ. ಆ ವರ್ಗದೊಳಗೆ ಮನಸ್ಸು, ಮಾತು ಕಾರ್ಯಗಳಲ್ಲಿ ಸಂಪೂರ್ಣ ಸಹಕಾರವಿರಬೇಕು. ಅವರೊಳಗೆ ಪರಸ್ಪರ ಗುಟ್ಟು ಗೋಪ್ಯಗಳಿರಬಾರದು—ಅವರ ಆತ್ಮವು ಒಂದೇ ಆಗಿರಬೇಕು.

ಠಕ್ಕು ವಂಚನೆಗಾರರಾಗಬೇಡಿರಿ. ನಿಮ್ಮಿಂದ ಸಾಧ್ಯವಾಗದನ್ನು ಪ್ರಯತ್ನಿಸಿ ನಿಮ್ಮ ಆರೋಗ್ಯವನ್ನು ಕಳಕೊಳ್ಳಬೇಡಿರಿ. ಸಂಯಮನದಿಂದ ಒಬ್ಬನ ಆರೋಗ್ಯಕ್ಕೆ ಹಾನಿಯುಂಟಾಗದು. ಹೊರಗಿನಿಂದ ಬ್ರಹ್ಮಚರ್ಯವನ್ನು ಪ್ರದರ್ಶಿಸಿ ಒಳಗೊಳಗೆ ಕಾಮೇಚ್ಛೆಗಳಿಗೆ ಮನಸ್ಸನ್ನು ಸಡಿಲುಬಿಡುವವರ ಆರೋಗ್ಯ ಮಾತ್ರ ಖಂಡಿತ ಕೆಡುವುದು. ಸಂಯಮಿಯಾದ ಬ್ರಹ್ಮಚಾರಿಯ ಮನೋಶಕ್ತಿಯು ದಿನೇ ದಿನೇ ಅಭಿವೃದ್ಧಿಗೊಳ್ಳುವುದು, ಅವರಲ್ಲಿ ಸಾಕ್ಷಾತ್ಕಾರವಾಗುವುದು.

ಸಂಯಮಿಗಳಾಗಿರಬೇಕಾದರೆ ನೀವು ದಲು ಮನಸ್ಸನ್ನೇ ಬಿಗಿಹಿಡಿಯಬೇಕು ನಿಮ್ಮ ನಿಮ್ಮ ಸಾಮರ್ಥ್ಯದ ಮಿತಿಯನ್ನು ತಿಳಕೊಂಡವರಾಗಿ ಅದಕ್ಕೆ ತಕ್ಕಂತೆ ಸಾಧ್ಯವಿದ್ದಷ್ಟನ್ನೇ ಮಾಡಿರಿ. ಯಜ್ಞೋಪವೀತಧಾರಣೆಯಿಂದ ಶೂದ್ರನಾಗಿದ್ದ ಹುಡುಗನು ಹೊಸ ಜನ್ಮತಾಳಿ ಬ್ರಾಹ್ಮಣನಾಗುವಂತೆ ಮದುವೆಯೂ ಹೊಸ ಜನ್ಮವನ್ನುಂಟುಮಾಡುವಂತಹ ಪವಿತ್ರವಾದ ವಿಷಯ. ಆದುದರಿಂದ ನಿಮ್ಮ ಯೋಜನೆಗಳನ್ನು ಶುದ್ಧೀಕರಣ ಮಾಡಿಕೊಳ್ಳಿರಿ. ಇದು ಸರ್ವತೋಮುಖ ಶ್ರೇಯೋಭಿವೃದ್ಧಿಯದು. ಈ ಜಗತ್ತೇ ಅಗಾಧವಾದ ಯೋಜನೆಯ ಪರಿಣಾಮದಿಂದ ಉದ್ಭವಿಸಿದುದಾಗಿದೆ. ಪವಿತ್ರವಾದ ಧ್ಯೇಯಗಳನ್ನು ಇಟ್ಟುಕೊಳ್ಳಿರಿ. ಆಂದರೆ ನಿಮಗೆ ಯಾವುದರ ಹಾನಿಯೂ ಎಟಕದು.

ಮಕ್ಕಳನ್ನು ಪಡೆಯುವ ಇಚ್ಛೆ ಇಲ್ಲದಿದ್ದರೆ ಮದುವೆ ಮಾಡಿಕೊಳ್ಳುವ ಆವಶ್ಯಕತೆಯೇ ಇಲ್ಲ. ಆತ್ಮಶಾಂತಿಗಾಗಿ ಮಾಡಿಕೊಳ್ಳುವ ಮದುವೆಗಳು ನನಗೆ ಮೆಚ್ಚುವುದಿಲ್ಲ. ಲೈಂಗೀಕ ವ್ಯವಹಾರೇಚ್ಛೆ ಇಲ್ಲದೆ ಕೆಲವರು ಸ್ತ್ರೀಯರನ್ನು ರಕ್ಷಣೆಮಾಡುವುದಕ್ಕೆಂದು ಮದುವೆ ಮಾಡಿಕೊಳ್ಳುತ್ತಾರೆ. ಆದರೆ ಇಂತಹ ಸಂದರ್ಭಗಳು ಬಹಳ ಅಪರೂಪವಾಗಿ ಬರುತ್ತವೆ.

ಮಹಾಭಾರತದಲ್ಲಿ ವ್ಯಾಸನು ನಿಯೋಗವನ್ನು ಅಭ್ಯಾಸ ಮಾಡುತಿದ್ದನಂತೆ. ಕುರೂಪಿಯೂ, ಭಯಂಕರನೂ, ಅಗಿದ್ದೆ ಅತನು ಯಾರಿಗಾದರೂ ಪಿಂಡದಾನವನ್ನು ಮಾಡುವ ಪ್ರಸಂಗದಲ್ಲಿ ನೈಗೆ ತುಸ್ಪವನ್ನು ಸವರಿ ಮತ್ತೆ ಸಂಭೋಗವನ್ನು ಕಾಡುತಿದ್ದನಂತೆ. ಅದು ಸಂತತಿ ದಾನಕ್ಕಾಗಿ ಮಾಡುವ ಕಾರ್ಯ. ಸಂತತಿ ಪಡೆಯುವ ಇಚ್ಛೆಯು ಸ್ವಾಭಾವಿಕವಾದುದು. ಒಂದು ಸಲಕ್ಕೆ ಸಂತತಿಯುಂಟಾದರೆ ಮತ್ತೆ ಲೈಂಗಿಕ ಲೀಲೆಯಲ್ಲಿ ಮಗ್ನನಾಗಬಾರದು.

ಶಾಸ್ತ್ರಕಾರನಾದ ಮನುವು ಮೊದಲನೇ ಪುತ್ರನನ್ನು ಧರ್ಮಜನೆಂದು ಕರೆಯುತ್ತಾನೆ. ನಂತರದವರು ಕಾಮಜರು ಅಂದರೆ ಕಾಮೇಚ್ಛೆಯು ಫಲವಾಗಿಯೇ ಜನ್ಮ ತಾಳಿದವರು. ಇದರಿಂದ ಲೈಂಗಿಕ ವ್ಯವಹಾರದ ಸಂಕ್ಷೇಪ ನೀತಿ ಸೂತ್ರವು ತಿಳಿದಂತಾಗುವುದು. ದೇವರೆಂದರೆ ಈ ನೀತಿ ಸೂತ್ರನೇ ಆಗಿರುತ್ತಾನೆ. ಇವಕ್ಕೆ ಮಣಿದಿರುವುದು ದೇವರಿಗೆ ವಿಧೇಯರಾಗಿದ್ದಂತೆಯೇ ಸರಿ. ಲಗ್ನಕಾಲದಲ್ಲಿ ಯಾವ ವಿಧಾನದಲ್ಲಿಯೂ ನಾವು ಈ ಸೂತ್ರಗಳನ್ನು ಮೀರ್ಕುವುದಿಲ್ಲವೆಂದು ನಿಮ್ಮಿಂದ ಮೂರು ಸರ್ತಿ ಹೇಳಿಸಲ್ಪಡುತ್ತದೆ. ಇಂತಹ ಪೂಜ್ಯವಾದ ನೀತಿ ಸೂತ್ರಗಳನ್ನು ಅನುಸರಿಸುವ ಕೆಲವೇ ಸ್ತ್ರೀ ಪುರುಷರಿದ್ದರೂ ಮುಂದೆ ಅವರು ಜಗತ್ತಿನ ಪವಿತ್ರ ಜನಾಂಗವೊಂದರ ಮೂಲ ಪುರುಷರಾಗದಿರರು.

ನಾನು ಕಸ್ತೂರ್‌ಬಾಳ ಮೇಲಿನ ಕಾಮ ದೃಷ್ಟಿಯನ್ನು ತೊಡೆದು ಹಾಕಿದ ಮೇಲೆಯೇ ನನಗೆ ನಿಜವಾದ ವಿವಾಹ ಸುಖವುಂಟಾಯಿತೆಂಬ ವಿಷಯವನ್ನು ಮರೆಯದಿರಿ. ತಾರುಣ್ಯದ ಭರದಲ್ಲಿದ್ದಾಗ ನಾನು ಬ್ರಹ್ಮಚರ್ಯವ್ರತ ಪ್ರತಿಜ್ಞೆಯನ್ನು ಕೈಕೊಂಡೆ. ನಾವೆಲ್ಲರೂ ಪವಿತ್ರವಾದೊಂದು ಕಾರ್ಯಕ್ಕೆ ಜನ್ಮವೆತ್ತಿದ್ದೇವೆ ಎಂಬುದನ್ನು ನಾವು ಮರೆಯಬಾರದು. ವಿವಾಹವು ಈ ಪವಿತ್ರ ಕಾರ್ಯಕ್ಕೆ ನೆರವಾಗುವ ಒಂದು ವಿಷಯವೆಂಬುದು ನನಗೆ ಅರಿವಾಗಿದೆ. ಇದನ್ನು ತಿಳಕೊಂಡರೆ ನಿಜವಾದ ಧರ್ಮದ ಜ್ಞಾನವಾಗುವುದು. ಕಸ್ತೂರ್‌ಬಾ ಅವಳು ನನ್ನ ಕಾಮೇಚ್ಛೆಗೆ ಬಲಿ ಬೀಳುತ್ತಿದ್ದರೆ ಅವಳಕ್ಕ ಇಷ್ಟೊಂದು ಚಟುವಟಿಕೆಯ ಕೆಲಸಗಳನ್ನು ಮಾಡುತ್ತಿರಲಿಲ್ಲ.

ಇಷ್ಟಾದರೂ ನನ್ನಲ್ಲಿ ಈ ಜಾಗೃತಿಯು ಬಹಳ ಕಾಲದ ನಂತರ ಉಂಟಾಯಿತೆಂಬುದಕ್ಕೆ ವಿಷಾಧಿಸುತ್ತೇನೆ. ನಿಮಗಾದರೂ ಸಕಾಲದಲ್ಲಿ ಈ ಕಾರಿತು ಬೋಧನೆ ದೊರಕುವಂತಾಯಿತೆಂಬುದಕ್ಕೆ ಸಂತೋಷಿಸುತ್ತೇನೆ. ನಾನು ಮಾಡಿದಷ್ಟೆಯಾಗಲಿ ಸಮಯವು ಸುಖಾಂಕಾಂಕ್ಷೆಗಳಿಗೆ ಕಿಂಚಿತ್ತಾದರೂ ಆಗಿರಲಿಲ್ಲ. ನಿಮಗಾದರೂ ಈಗಿನದು ಬಹಳ ಯೋಗ್ಯಕಾಲ. ಆದರೆ ನನ್ನನ್ನು ಕವಚದಂತೆ ರಕ್ಷಿಸಿದ ಒಂದು ವಿಷಯವೆಂದರೆ ನನ್ನ ಸತ್ಯಪ್ರೇಮ. ಸತ್ಯವೇ ನನ್ನ ಜೀವನದ ಭದ್ರವಾದ ತಳಹದಿ. ಬ್ರಹ್ಮಚರ್ಯ ಆಸೆಗಳು ಆದರಿಂದಲೇ ಹುಟ್ಟಿದವು. ನೀವು ಎಂತಹ ಮಾರ್ಗವನ್ನವಲಂಬಿಸಿದರೂ ಸತ್ಯವನ್ನು ಮಾತ್ರ ಮರೆಯದಿರಿ. ನಿಮ್ಮ ಸ್ವತಂತ್ರ ಕಲ್ಪನೆಗಳನ್ನು ಮರೆಮಾಡಿರಿ. 'ಮರೆ ಮಾಡುವುದು ಅನಮಾನಕರವಾದರೆ ಅವುಗಳ ಕುರಿತು ಯೋಚಿಸುವುದು ಇನ್ನೂ ಹೆಚ್ಚಿನ ನಾಚಿಕೆಗೇಡಿನದು.'

'ಸ್ವ. ಮಾ.'

ವೈಸರಾಯಿ ನೇವೆಲ್ಲರಿಗೂ ರಷ್ಯಾಕ್ಕೂ ನಿಕಟ ಸಂಬಂಧವಿದೆ. ಅವರಿಗೆ ರಷ್ಯನ್ ಭಾಷೆಯು ಸ್ಪಷ್ಟವಾಗಿ ಬರುತ್ತದೆ. ರಷ್ಯಕ್ಕೆ ಅವರು ಸೈನ್ಯ ರಾಯಭಾರಿಯ ಪ್ರತಿನಿಧಿಗಳಾಗಿ ಹೋಗಿದ್ದರು. ರಷ್ಯದಲ್ಲಿ ಒಂದು ಸೈನ್ಯ ಕವಾಯತು ಪ್ರದರ್ಶನ ನೋಡುತ್ತಿದ್ದಾಗ ಒಂದು ಗುರಿ ತಪ್ಪಿದ ಗುಂಡಿನಿಂದ ಅವರ ಕಣ್ಣೊಂದು ನಷ್ಟವಾಗಿ ಹೋಯಿತು. ಬ್ರಿಟಿಷ್ ಸೇನಾಪತಿಗಳಲ್ಲಿ ಜರ್ಮನರಿಂದ ಅತಿಯಾಗಿ ಹೆದರಲ್ಪಡುವವರೆಂದರೆ ವೇವೆಲರು:

ಕೊ ಡ ಗು .

ಶ. ೨೦-೪-೧೯೪೫ನೇ ಶುಕ್ರವಾರ

ಪ್ರಸಂಶನೀಯ.

ಕೊಡಗಿನಲ್ಲಿ ಸಾರ್ವತ್ರಿಕ ಹಬ್ಬಿರುವ ಮೂಡಕ ಪದಾರ್ಥಗಳ ಹಾವಳಿಯನ್ನು ತಡೆಗಟ್ಟುವ ಪ್ರಯತ್ನವು ನಡೆಯುತ್ತಿದೆ. ಈ ವರೆಗೆ ಜನರೂ ಕೂಡ ಇದಕ್ಕೆ ಪೂರ್ಣ ಬೆಂಬಲ ಕೊಡುತ್ತಾ ಬಂದಿದ್ದಾರೆ. ಈ ಯೋಜನೆಯು ಯಶಸ್ವಿಯಾಗಬೇಕಾದರೆ ಇನ್ನಷ್ಟು ಅವಿಚ್ಛಿನ್ನ ಕಾರ್ಯಕ್ರಮವು ನಡೆಯಬೇಕಾಗಿ. ಮೂಡಕ ಪದಾರ್ಥಗಳನ್ನು ಸೇರಿಸಲಾಗದೆಂದು ತೀರ್ಮಾನಿಸಿ ಕುಳಿತುಕೊಂಡರೆ ಸಾಲದು. ಅದನ್ನು ಕಾರ್ಯತಃ ಜಾರಿಯಲ್ಲಿ ತರಲು ಪ್ರಯತ್ನಿಸಬೇಕು. ಈ ಬಗ್ಗೆ ಅವಿಶ್ರಾಂತ ಪ್ರಚಾರ ನಡೆಸಬೇಕು. ಗ್ರಾಮಾಂಗಳಲ್ಲಿ ಈ ಬಗ್ಗೆ ಸ್ವಯಂಸೇವಕರ ತಂಡವನ್ನು ಏರ್ಪಡಿಸಿದರೆ ಉತ್ತಮ. ಬೆಳ್ಳೂಡು ಗ್ರಾಮವು ಆ ರೀತಿ ಮಾಡಿದೆ. ಸ್ವಯಂಸೇವಕರ ತಂಡವೊಂದು ನಿರ್ಮಾಣವಾದರೆ ಮೂಡಕ ಪಾನೀಯಗಳನ್ನು ನಿಲ್ಲಿಸುವ ಕಾರ್ಯವೊಂದಲ್ಲ; ಮೂದರಿ ಗ್ರಾಮರಚನೆಯ ಕಾರ್ಯವನ್ನೂ ಕ್ರಮೇಣ ಮಾಡಬಹುದು.

ಮಧ್ಯಾನವನ್ನು ಸ್ಥಳೀಯ ಪಾನನಿರೋಧ ಸಮಿತಿಯ ಕೇಳಿಕೆಯಂತೆ ನಿಲ್ಲಿಸಿ ಅನುಕರಣೀಯ ಉದಾಹರಣೆಯನ್ನು ಕಾರ್ಯತಃ ಮಾಡಿ ತೋರಿಸಿರುವ ಮಹನೀಯರನ್ನು ಶ್ಲಾಘಿಸಬೇಕಿದೆ. ಅದರಲ್ಲೂ ಮೂಡಕ ಪಾನೀಯಗಳಿಗೆ ವೆಚ್ಚವಾಗಬಹುದಿದ್ದ ಹಣವನ್ನು ಸಾರ್ವಜನಿಕ ಉಪಯೋಗದ ಕಾರ್ಯಗಳಿಗೆ ವಿನಿಯೋಗಿಸುವ ಮಾದರಿಯೂ ಪ್ರಸಂಶನಾರ್ಹವಾದುದು. ಕೊಡಗಿನ ಮಹನೀಯರು ಈ ಉದಾಹರಣೆಗಳನ್ನು ಅನುಸರಿಸಬೇಕು. ಬೇರೊಬ್ಬರು ಅನುಸರಿಸುವಂತೆ ಪ್ರೋತ್ಸಾಹಿಸಬೇಕು.

ಸಮಾಜದ ಮುಂದಾಳುಗಳೆನ್ನುವ ಜನರು ಮಾಡುವ ಕೆಲಸವು ಅವರನ್ನು ಅನುಸರಿಸಿ ನಡೆಯುವವರ ಮೇಲೆ ತೀವ್ರ ಪರಿಣಾಮವನ್ನುಂಟುಮಾಡುತ್ತದೆ. ಇಂದು ಸಮಾಜದ ಮುಂದಾಳುಗಳೆಂದುಕೊಳ್ಳುವ ಕೆಲವರು ತಮ್ಮ ಜಾಗೂ ದೇಶದ ಉದ್ಧಾರದ ದೃಷ್ಟಿಯಿಂದ ಮದುವೆ ಮೊದಲಾದ ಹಬ್ಬ ಹುಣ್ಣಿಮೆಗಳಲ್ಲಿ ಮೂಡಕ ಪದಾರ್ಥಗಳನ್ನು ವರ್ಜಿಸಿದರೆ ಇತರರು ಅವರನ್ನು ಹಿಂಬಾಲಿಸುವವರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಕೊಡಗಿನ ಭವಿಷ್ಯವು ಸಮಾಜದ ಮುಂದಾಳುಗಳ ಮೇಲೆ ನಿಂತಿದೆ. ಅವರು ತಮ್ಮ ಜವಾಬ್ದಾರಿಯನ್ನರಿತು ನಾಡಿನ ಏಳಿಗೆಗೆ ಪ್ರಯತ್ನಿಸಬೇಕಾದುದು ಆದ್ಯ ಕರ್ತವ್ಯವಾಗಿದೆ,

ವರ್ತಮಾನ.

ಬೆಳ್ಳೂಮೂಡು ಗ್ರಾಮಸ್ಥರ ಸಭೆಯೊಂದು ನಡೆದು ಆ ಗ್ರಾಮವನ್ನು ಮೂದರಿ ಗ್ರಾಮವಾಗಿ ಪೂಡುವಂತೆ ತೀರ್ಮಾನಿಸಿದ್ದಲ್ಲದೆ ಪ್ರಥಮ ಹೆಜ್ಜೆಯಾಗಿ ನಿಶಾ ಸೇವನೆಯನ್ನು ನಿಲ್ಲಿಸಲು ಗ್ರಾಮದ ಮುಖ್ಯಸ್ಥರಿಂದ ಕೂಡಿದ ಹದಿನೈದು ಜನ ಸ್ವಯಂ ಸೇವಕರ ಸಮಿತಿಯೊಂದನ್ನು ನೇಮಿಸಲಾಗಿದೆ.

ತಮ್ಮಲ್ಲಿ ಮುಂದೆ ಕೆಲವೇ ದಿನಗಳಲ್ಲಿ ಆಗಲಿರುವ ಮದುವೆಗಳಲ್ಲಿ ಮೂಡಕ ಪದಾರ್ಥಗಳನ್ನು ಸೇರಿಸುವದನ್ನು ಮನ್ನಾ ಮಾಡಬೇಕೆಂದು ಮಡಿಕೇರಿಯ ಪಾನನಿರೋಧ ಸಮಿತಿಯವರು ಶ್ರೀಗಳಾದ ಕೊಂಗಟ್ಟಿರ ಅಪ್ಪಯ್ಯ ಮತ್ತು ಕೊಡಂದೇರ ಮಂದಣ್ಣ ಇವರುಗಳಿಗೆ ಬರಕೊಂಡಂತೆ ಈ ಮಹನೀಯರು ಮುಂಬರುವ ತಮ್ಮ ಮಕ್ಕಳ ಮದುವೆಯಲ್ಲಿ ಮೂಡಕ ಪದಾರ್ಥಗಳನ್ನು ಸೇರಿಸುವುದಿಲ್ಲವಾಗಿ ನಿಶ್ಚಯಿಸಿದ್ದಾರೆ

ಮಿಸೆಸ್ ಜೇನಂಡ ಪೊನ್ನಪ್ಪನವರು ತನ್ನ ಪುತ್ರನ ಮದುವೆಯಲ್ಲಿ ಮೂಡಕ ಪದಾರ್ಥವನ್ನು ಸೇರಿಸುವುದಿಲ್ಲವೆಂದು ನಿಶ್ಚಯಿಸಿ, ಮೂಡಕ ಪದಾರ್ಥ ಒಂದು ವೇಳೆ ಸೇರಿಸಿದ್ದಾರೆ ತನಗಾಗುತ್ತಿದ್ದ ಖರ್ಚನ್ನು ಅಂದರೆ ರೂ ೫೦೦ನ್ನು ಕೊಡವ ವಿದ್ಯಾನಿಧಿಗೆ ರೂಪ್ಸಿ ಆಜೀವ ಸದಸ್ಯರಾಗಿರುವರು

ಶ್ರೀ ಚಪ್ಪಾರಂಡ ತಿಮ್ಮಯ್ಯನವರು ಕೊಡವ ವಿದ್ಯಾನಿಧಿಗೆ ರೂ. ೫೦೦ ಕೊಟ್ಟು ತಜೀವ ಸದಸ್ಯರಾಗಿರುವರು.

ಅಪಿಲ ಕೊಡಗು ಜಮ್ಮಳಿ ವ್ಯಾಪಾರಿಗಳ ಸಂಘದ ವಾರ್ಷಿಕ ಮಹಾ ಸಭೆಯು ತಾ. 21-4-45ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿರಾ. ಬ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಹೆಬ್ಬಾಲೆ ಮಾಧ್ಯಮಿಕ ಶಾಲೆಯ ವಧರ್ಂತ್ಯುತ್ಸವವು ಸೋಮವಾರಪೇಟೆ ಹೈಸ್ಕೂಲು ಹೆ. ಮಾ. ಶ್ರೀ ಡಿ. ಎನ್. ದೇವಯ್ಯನವರ ಅಧ್ಯಕ್ಷತೆಯಲ್ಲಿ ತಾ. 12-4-45ರಲ್ಲಿ ನಡೆಯಿತು.

ವೀರಾಜಪೇಟೆ ಜಮ್ಮ ಮತದಾರ ಕ್ಷೇತ್ರದ ಪರ ಕೌನ್ಸಿಲಿಗೆ ನೇಮಕ ಪತ್ರ ಕೊಟ್ಟ ಶ್ರೀ ಕುಂಬಿರಂಡ ಬೆಳ್ಯಪ್ಪನವರ ಪತ್ರವು ಸರಿಯಿಲ್ಲವೆಂದು ರಿಟರ್ನಿಂಗ್ ಆಫೀಸರು ಕೊಟ್ಟ ತೀರ್ಮಾನದ ಮೇಲೆ ಅವರು ಚೀಫ್ ಕಮಿಷನರಿಗೆ ಅಫೀಲು ಮಾಡಿದ್ದು ಚೀಫ್ ಕಮಿಷನರು ಅವರ ಉಮೇದ್ವಾರಿಕೆಯನ್ನು ಅಂಗೀಕರಿಸಿರುವರು.

ತಾ. 16 ರಿಂದ ತಾ. 20 ರ ವರೆಗೆ ಕೊಡಗಿನ ಅರುವತ್ತು ಸೆಕೆಂಡರಿ ಮತ್ತು ಹೈಯರ್ ಎಲಿಮೆಂಟರಿ ಗ್ರೇಡಿನ ಅಧ್ಯಾಪಕರಿಗೆ ಮಡಿಕೇರಿಯಲ್ಲಿ ಒಂದು ವಿಶಿಷ್ಟ ಶರಬೇತು ಕೊಡಲಾಯಿತು. ಈ ಸಂದರ್ಭದಲ್ಲಿ ವಿದ್ಯಾಪ್ರಚಾರದ ವಿಚಾರವಿನಿಮಯ ನಡೆದುದಲ್ಲದೆ ಆಡ್ಯ ಮಹನೀಯರ ಉಪನ್ಯಾಸಗಳ ಏರ್ಪಾಡೂ ಆಗಿತ್ತು.

ತಾ. 25-4-45ರಲ್ಲಿ ಸೋಮವಾರಪೇಟೆ ಮಹಿಳಾ ಸಹಕಾರ ಸಮಾಜದ ಬಾಲಿಕೆಯರಿಂದ ವಿವಿಧ ವಿನೋದಾವಳಿಗಳು ಶ್ರೀ. ಚೆನ್ನಬಸಪ್ಪ ಹಾಲ್‌ನಲ್ಲಿ ನಡೆಯುವವು.

ಮಡಿಕೇರಿ ಸರ್ಕಲಿನ ಸಹಕಾರ ಸಂಘಗಳ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಜಿ. ಎನ್. ತಿಮ್ಮಪಯ್ಯನವರನ್ನು ಪೊನ್ನಂಪೇಟೆಗೂ, ಶ್ರೀ. ಉಳ್ಳಿಯಾಡ ದೇವಯ್ಯನವರನ್ನು ಪೊನ್ನಮ್ಮತ್ತಿಗೂ, ಶ್ರೀ. ಕೆ. ಎ. ಸೋಮಯ್ಯನವರನ್ನು ಮಡಿಕೇರಿಗೂ, ಶ್ರೀ. ಎಚ್. ಕೆ. ಚಿಂತಾಮಣಿಯನ್ನು ವೀರಾಜಪೇಟೆಗೂ ಶ್ರೀ. ಎನ್. ಟಿ. ಅಪ್ಪಯ್ಯನವರನ್ನು ಮೂರ್ನಾಡಿಗೂ ವರ್ಗಾಯಿಸಲಾಗಿದೆ. ಫ್ರೀಜರ್‌ಪೇಟೆ ಮತ್ತು ಶ್ರೀಮಂಗಲ ಸರ್ಕಲ್‌ಗಳಿಗೆ ಇನ್ಸ್‌ಪೆಕ್ಟರರ ನೇಮಕವು ಬೇಗ ಆಗಲಿದೆಯೆಂದು ತಿಳಿದುಬಂದಿದೆ.

ಮಡಿಕೇರಿ ಬೆಂಚ್ ಕೋರ್ಟಿನ ಅಧ್ಯಕ್ಷರಾಗಿದ್ದ ಶ್ರೀ ಕೊಂಗಟ್ಟಿರ ಅಪ್ಪಯ್ಯನವರು ತಮ್ಮ ಸ್ಥಳವನ್ನು ಬಿಟ್ಟಿರುವರು. ಶ್ರೀಗಳಾದ ಕೊಡಂದೆರ ಸಂಬಯ್ಯ (ಅಧ್ಯಕ್ಷ) ಕೀಲಿಯಂಡ ಬೆಳ್ಯಪ್ಪ, ಕೊರವಂಡ ತಿಮ್ಮಯ್ಯ, ಎಂ ಚೆನ್ನಬಸಪ್ಪ ಮತ್ತು ಖಾನ್ ಬಹದೂರ್ ಅಬ್ದುಲ್ ರಹಮಾನ್ ಖಾನ್ ಇವರು ಬೆಂಚ್ ಕೋರ್ಟಿನ ಈಗಿನ ಸದಸ್ಯರಾಗಿದ್ದಾರೆ.

ಕೆಲವೇ ವಾರಗಳ ಹಿಂದೆ ಓರ್ವ ಜರ್ಮನ್ ಸರಕಾರಿ ಅಧಿಕಾರಿಯು ಇಂಗ್ಲೆಂಡಿನಲ್ಲಿದ್ದನಂತೆ. ಹಿಂದೆ ಹರ್ ಹೆಸ್‌ನೆಂಬವನು ಅಕಸ್ಮಾತ್ತಾಗಿ ಇಂಗ್ಲೆಂಡಿನಲ್ಲಿಳಿದು ಮತ್ತೆ ಕೈದಿಯಾದನು. ಅವನು ರಾಜಿ ಒಪ್ಪಂದಕ್ಕಾಗಿ ಬಂದಿದ್ದನೆಂದು ಹೇಳಲಾಗಿತ್ತು. ಈ ಸಲ ಬಂದವನು ಹರ್ ಕ್ಲೋಸ್ ಎಂಬವನು. ಇವನಿಗೆ ಸರಕಾರದ ಕಡೆಯಿಂದ ವಿಶೇಷ ಆತಿಥ್ಯ ಸತ್ಕಾರಗಳನ್ನು ಮಾಡಲಾಗಿದೆ ಎಂದೂ ವರ್ತಮಾನವಿದ್ದುದರಿಂದ - ಪಾರ್ಲಿಮೆಂಟಿನಲ್ಲಿ ಆ ಕುರಿತು ಸದ್ಯದಲ್ಲೇ ಚರ್ಚೆ ನಡೆಯಲಿದೆ.

ಮಡಿಕೇರಿ-ಸುಂಟಿಕೊಪ್ಪ ಭಾಗಮಂಡ್ಲ ನಾಡು ಜಮ್ಮ ಓಟರುಗಳಲ್ಲಿ ಚೌರಿರ ಮಂದಣ್ಣನ ವಿನಂತಿ.

ನಾನು ಕಾಂಗ್ರೆಸಿಗೆ ವಿರೋಧವಾಗಿ ಕೆಲಸಮಾಡುವುದಿಲ್ಲವೆಂದು ತೀರ್ಮಾನ ಮಾಡಿರುವುದರಿಂದ, ನನ್ನ ಕೌನ್ಸಿಲು ಚುನಾವಣೆಯ ನಾಮನಿರ್ದೇಶನವನ್ನು ವಾಪಸು ತೆಗೆದುಕೊಂಡಿರುತ್ತೇನೆ. ದಯವಿಟ್ಟು ನನಗೆ ಓಟು ಕೊಡಬಾರದಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಚೌರಿರ ಮಂದಣ್ಣ.

ಪೊನ್ನಂಪೇಟೆ ಶ್ರೀಮಂಗಲ ನಾಡು ಜಮ್ಮ ಓಟರುಗಳಲ್ಲಿ ವಿನಂತಿ.

ನಾನು ನಮ್ಮ ಪೊನ್ನಂಪೇಟೆ ಶ್ರೀಮಂಗಲ ನಾಡಿಗೆ ಜಮ್ಮ ಓಟರುಗಳ ಪ್ರತಿನಿಧಿಯಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ ಒಬ್ಬ ಉಮೇದಾರನಾಗಿ ನಿಂತಿರುತ್ತೇನೆ. ತಮ್ಮೆಲ್ಲರ ಅಮೂಲ್ಯವಾದ ಓಟನ್ನು ನನಗೆ ತಾ. 14-5-1945 ರಲ್ಲಿ ಕೊಟ್ಟು ತಮ್ಮ ಸೇವೆಯನ್ನು ಕೌನ್ಸಿಲ್ ಮುಖಾಂತರ ಮಾಡುವುದಕ್ಕೆ ನನಗೆ ಅವಕಾಶ ಕೊಡಬೇಕಾಗಿ ಅತಿವಿನಯದಿಂದ ಪ್ರಾರ್ಥಿಸುತ್ತೇನೆ.

ಕೋಳೆರ ಕರ್ಯಬಯ್ಯ.

ಪ್ರಕಟಣೆ.

ವೀರರಾಜೇಂದ್ರಪೇಟೆ ನಾರ್ಥ ಬೆಳರಿನೊಡು ಗ್ರಾಮದ ತೀತೀರ ಮಂದಪ್ಪನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ನನ್ನ ತಂದೆ ಬಿದ್ದಪ್ಪನು ವ್ಯತೀತಪಟ್ಟು ಸುಮಾರು ಹತ್ತೊಂಬತ್ತು ವರ್ಷಗಳಾಯಿತು. ತಮ್ಮ ಬಿದ್ದಪ್ಪನಿಗೆ ಪುತ್ರ ಪುತ್ರಿ ಸಂತತಿಗಳೇನೂ ಇಲ್ಲ. ತಮ್ಮ ಬಿದ್ದಪ್ಪನ ಹೆಂಡತ್ತಿ ಪೂವವ್ವನು ಆ ಕಾಲಕ್ಕಾಯಿತು ನಮ್ಮ ಮನೆಯಲ್ಲೇ ಇರುವುದಾಗಿದೆ. ಸದರಿ ಪೂವವ್ವನಿಗೆ ಕುಟುಂಬದಿಂದ ಜೀವನಕ್ಕೆ ಇಕ್ಕೇ ಹೋಗಲು ಕುಟುಂಬದ ಆಸ್ತಿಯ ಮೇಲೆಯೂ ಹಕ್ಕುಭಾದ್ಯತೆಯಿರುವುದಿಲ್ಲ. ಸದರಿ ಪೂವವ್ವನಿಗೆ ಜೀವನಾಂಶಕ್ಕೆ ಯಾವ ತೊಂದರೆ ಇರುವುದಿಲ್ಲ. ಇವಳು ಕುಟುಂಬದ ಆಸ್ತಿಯನ್ನು, ಗಿರ್ವಿಯೊ ಭೋಗ್ಯ ಬರ ಕೊಟ್ಟು ಅನಾವಶ್ಯ ಸಂಬಂಧಪಡಿಸಿ ಆಸ್ತಿಗಳನ್ನು ದುರುಪಯೋಗಪಡಿಸಿ ಕುಟುಂಬಕ್ಕೆ ನಷ್ಟ ಕಷ್ಟಕರಲು ಪ್ರಯತ್ನಿಸುತ್ತಾಳೆ. ಆದರಿಂದ ದಕ್ಷಿಣ ಕೊಡಗು ತಾಲೋಕು ವೀರಾಜಪೇಟೆನಾಡು ಬೆಳ್ಳರಿನೊಡು ಗ್ರಾಮದಲ್ಲಾ ಮತ್ತು ವೈತಾಡಿ ಗ್ರಾಮದಲ್ಲಾ ನನ್ನ ಹೆಸರಿನಲ್ಲಾ ಜೀವಾಂಬಂದಿ ನಡೆದುಬರುವ ಯಾವ ಆಸ್ತಿಗಳನ್ನೂ ಪೂವವ್ವನಿಂದ ಗಿರ್ವಿಯೊ ಭೋಗ್ಯ ಆಧಾರ ಬರೆಸಿಕೊಂಡು ಲೇವಾದೇವಿ ನಡಿಸಕೂಡದು. ಅಲ್ಲಿ ಪೂವವ್ವನಿಗೆ ಯಾರೂ ಮೈಸಾಲ ಸಹ ಕೊಡಕೂಡದು ಹಾಗೆ ಕೊಟ್ಟಲ್ಲು ಕುಟುಂಬದ ಚರಾಸ್ತಿರ ಆಸ್ತಿಗಳಿಂದ ಸಾಲ ವಸೂಲಾತಿಗೆ ಆಸ್ಪದಸಿಗಲಾರದು. ಸದರಿ ಪ್ರಕಟಣೆ ವಿಷಯಗಳನ್ನು ಉಲ್ಲಂಗಿಸಿ ಪೂವವ್ವನಲ್ಲಾ ಲೇವಾದೇವಿ ನಡಿಸಿದಲ್ಲು ಅವಳಿಂದ ಬರೆಸಿಕೊಂಡ ಸರ್ವಬಾಬಿನ ಆಧಾರ ರದ್ದಾಗಿರತಕ್ಕದ್ದು. ಮತ್ತು ಈ ಸಮ್ಮಂದ ಮುಂದಕ್ಕೆ ಆಗುವ ಸರ್ವನಷ್ಟ ಕಷ್ಟಗಳಿಗೆ ಲೇವಾದೇವಿ ಕೊಟ್ಟವರೇ ಬದ್ಧರಾಗಿರತಕ್ಕದ್ದು.

ತಾ. 29-3-45. ಟಿ. ಎ. ಮೇದಪ್ಪ.

4-2

—•— ಶೇಲಡಾ —•—

ಎಂಟಿ ಮಲೇರಿಯೂ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರ ಗಡ್ಡೆ, ತಜ್ಜನ್ಯ ಆಶಕ್ತತೆ ಮೇಲೆ ರಾಮಬಾಣ; ಲಿವರ, ಪೊಟ್ಟಿನೋವು, ಮಲಬದ್ಧತೆ, ಸಂಧಾರಿಸಿ ಶಕ್ತಿ ಬೆಳೆಸುತ್ತದೆ. ಕ್ವಿನೈನ್ ಬದಲು ವೈದ್ಯ ಡಾಕ್ಟರು ದವಾಖಾನೆಗಳಲ್ಲಿ ಉಪಯೋಗಿಸುವರು. 1000 ಗುಳಿಗೆಗಳಿಗೆ ರೂ. 15-0-0, 100ಕ್ಕೆ ರೂ. 1-12-0. ಈ ಔಷಧಿ ಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮೂಡಿ ಕೊಟ್ಟವರಿಗೆ ಒಂದು ಸಾವಿರ ರೂ. ಬಹು ಮಾನ ಕೊಡಲಾಗುವುದು. ಪ್ರತಿ ಊರಿನಲ್ಲಿ ನೂರಾಟಕ್ಕೆ ಏಜೆಂಜರು ಬೇಕು.

ಶೇಲಡಾ ಕೆಮಿಕಲ್ ಕಂಪೆನಿ,

ಶಿರಸಿ, ಉತ್ತರ ಕನ್ನಡ.

ಸೋಲ್ ಏಜೆಂಟರು—

ಎಸ್. ಎಲ್. (ಅಪ್ಪುರಾವ್) ಧಾಕಪ್ಪ,
ಒಡನರ ಔಷಧಿ ಸರ್ವಿಸ್,
ಶಿರ್ಸಿ, ಉತ್ತರ ಕನ್ನಡ.



ಕಾಫಿ ಬೀಳೆಯನ್ನು ಕೊಂಡುಕೊಳ್ಳುವುದಕ್ಕಿಂಥಾ ಹುಡಿಯನ್ನು ಪಚೆದುಕೊಂಡರೆ ಪೌಂಡಿಗೆ ಒಂದಾಣೆ ಲಾಭ ದೊರೆಯುವುದು.

14) ಕಾಫಿ ಹುಡಿ ರ ತಲು 1ಕ್ಕೆ ರೂ. 1—7—0.



ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

ಇವರ ಸಿದ್ಧೌಷಧಗಳು.

1. **ನಿಕಾಫ್ ಟೂತ್ ಪೌಡರ್.** ಬೆಲೆ ಪೌಂಡ್ ಒಂಗಕ್ಕೆ 0-1-0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. **ಪಾಮರಿ ಚೂರ್ಣ** .... ಬೆಲೆ ಪೌಂಡ್ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)
3. **ಬಾಲವರ್ಧಿನಿ ಮಿಶ್ರಣ** .... ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)
4. **ದ್ರಾಕ್ಷಾರಿಷ್ಟ** .... ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಶ್ಯಗಳಿಗೆ)
ಉಚಿತ ಕ್ಯಾಟಲಾಗಿಗೆ ಬರೆಯಿರಿ—

ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
ದಿ ಅಶ್ವಿನಿ ಮೆಡಿಕಲ್ ಹಾಲ್,
215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.
9)

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ವೋ—ಫಾಸ್ಫೋ—ಮೊಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಮೊಲ್ಟ್, ಹೆಪೋಗ್ಲೋಬಿನ್, ಸೋಡಿಗ್ಲಿಸರೊ ಫಾಸ್ಫೇಟ್ ಪೆಪ್ಸಿನ್, ಸಾಲ್, ಮೊಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶ ವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಿ ಷಾಪುಗಳಲ್ಲಿವೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.
25)

ಯುದ್ಧ ಕ್ಷೇತ್ರ.

—೦೦—

ಈ ವಾರದ ಯುದ್ಧ ವಾರ್ತೆಗಳಿಗಿಂಥಾ ಪ್ರಾಮುಖ್ಯವಾಗಿ ಪ್ರೆಸಿಡೆಂಟ್ ರೂಸ್‌ವೆಲ್ಟರ ನಿಧನ ವಾರ್ತೆಯು ರಣರಂಗದ ಹಾಗೂ ಜನತೆಯ ಮೇಲೆ ಹೆಚ್ಚಿನ ಕಳವಳವನ್ನು ಹುಟ್ಟಿಸಿದೆ. ಯುದ್ಧದ ಭವ್ಯಭವಿಷ್ಯದ ನಿರ್ಮಾಪಕರಲ್ಲೊಬ್ಬರಾದ ಇವರ ನಿಧನದಿಂದ ಸ್ವಲ್ಪ ನಷ್ಟಿಗೆ ಮಿತ್ರ ರಾಷ್ಟ್ರಗಳಿಗೆ ನಷ್ಟವಾಯಿತೆನ್ನುವದರಲ್ಲಿ ಅಡ್ಡಿಯಿಲ್ಲ. ಅಕ್ಷರಾಷ್ಟ್ರಗಳು ರೂಸ್ವೆಲ್ಟ್ ವಜ್ರಮುಷ್ಟಿಯು ತಪ್ಪಿಹೋದುದು ಸಂತೋಷಗೊಂಡಿರಲೂ ಬಹುದು. ಪ್ರೆಸಿಡೆಂಟ್ ರೂಸ್ವೆಲ್ಟರು ಯುದ್ಧಾಂತ್ಯದ ವರೆಗೆ ಬದುಕಬೇಕಿತ್ತು. ಅವರು ಯೂರೋಪ ಯುದ್ಧವನ್ನು ಜಯದ ಬಾಗಿಲಿಗೆ ತಂದು ನಿಲ್ಲಿಸಿರುವರೋ ಅದೇ ಯುದ್ಧದ ನಂತರದ ಶಾಂತಿಯ ಸಂಸ್ಥಾಪನೆಯಲ್ಲೂ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಅವರ ಬಾಲಿಗೆ ಬಂದವರು ಯುದ್ಧವನ್ನು ಈಗಿನಂತೆಯೇ ಮುಂದರಿಸುವ ಅಭಿಪ್ರಾಯದವರಿದ್ದಾರೆ. ನಾಝಿ ಮತ್ತು ಜಪಾನೀ ಏಜಂಟರುಗಳು ಮಿತ್ರ ಶಿಬಿರದಲ್ಲಿ ಒಡಕುತರಲು ಪ್ರೆಸಿಡೆಂಟರ ನಿಧನದ ಈ ಸಂದರ್ಭವನ್ನು ಉಪಯೋಗಿಸುವ ಸಾಧ್ಯತೆಯಿದೆಯೆಂದು ವಾರ್ತೆಗಳು ಸೂಚಿಸುತ್ತವೆ. ಆದರೆ ಇಂಥಾ ಪ್ರಚಾರಗಳಿಂದ ಪುರುಷಾರ್ಥವೇನೂ ಸಾಧಿಸಲ್ಪಡಲಾರದು.

ಮಿತಿಮೀರಿದ ಪೇಗದಿಂದ ಮುಂದರಿಯುತ್ತಿದ್ದ ಮಿತ್ರದಂಡುಗಳ ಮೇಲೆ ಈ ನಿಧನವಾರ್ತೆಯ ಪ್ರಭಾವವು ಬಹುವಾಗಿ ಆಗಿರಲು ಸಾಕು. ಮುಖದ ಮೇಲೆ ತಣ್ಣೀರೆರಚಿದಂತೆ ಸರ್ವ ಯುದ್ಧಗಳೂ ತತ್ಕಾಲ ತಟಸ್ಥವಾಗಬಹುದು. ಆದರೆ ರೂಸ್ವೆಲ್ಟರು ಯಾವ ಧ್ಯೇಯಕ್ಕಾಗಿ ಕಡೆಯ ತನಕ ಶ್ರಮಿಸಿದರೋ ಆ ಧ್ಯೇಯದಿಂದ ಸಜೀವತನಗೊಂಡು ಮಿತ್ರದಂಡುಗಳು ಇನ್ನೂ ಮುಂದರಿಯುವದರಲ್ಲಿ ಸಂಶಯವಿಲ್ಲ. ಈ ವಾರ ಪ್ರತ್ಯಕ್ಷ ರಣರಂಗವನ್ನವಲೋಕಿಸಿದರೆ ಮಹತ್ವದ ಘಟನೆಗಳೇನೂ ಕಂಡುಬರುವದಿಲ್ಲ. ರಷ್ಯನ್ ಮತ್ತು ಮಿತ್ರದಂಡುಗಳು ಎರಡು ಕಡೆಗಳಿಂದ ಮುಂದೊತ್ತುತ್ತಿದ್ದರೂ ಹೇಳಿಕೊಳ್ಳಬಹುದಾದಷ್ಟು ಕಾರ್ಯಸಾಧನೆಯಾಗಿಲ್ಲ. ವಿಯನ್ನಾನಗರವು ರಷ್ಯನರ ವಶವಾಗಿದೆ. ಪಶ್ಚಿಮದಲ್ಲಿ ಜನರಲ್ ಮಾಂಟ್‌ಗೋಮರಿಯವರು ಮತ್ತು ಈತನ್ ಹೋವರರು ಪ್ರಚಂಡ ಹೋರಾಟ ನಡೆಸುತ್ತಿದ್ದರೂ ಜರ್ಮನರ ಪ್ರತಿಘಟನಾಶಕ್ತಿಯು ಇನ್ನೂ ಉಳಿದಿರುವಂತೆ ಕಂಡು ಬರುತ್ತದೆ. ಜರ್ಮನಿಯು ಸುಮಾರು 25000 ಚರದ ಮೈಲು ಜಾಗವು ಮಿತ್ರವಶವಾಗಿದೆ ಜರ್ಮನಿಯು ತನ್ನ ಕಡೇ ಪ್ರಯತ್ನಕ್ಕಾಗಿ ಸಿದ್ಧತೆ ನಡೆಸಿದೆ. ನಂದಿಹೋಗಲಿರುವ ದೀಪವು ಕಡೆಗೊಮ್ಮೆ ಪ್ರಜ್ವಲಿಸಿ ಆರುವಂತೆ ಜರ್ಮನರು ಮತ್ತೊಮ್ಮೆ ಪ್ರಚಂಡ ಶೌರ್ಯದಿಂದ ಹೋರಾಡಬಹುದು. ಗ್ರೀಸಿನಲ್ಲಿ ಪುನಃ ಅಲ್ಪ ಸ್ವಲ್ಪ ಅಶಾಂತಿ ತಲೆದೋರಿದೆ. ಇಂಡನೀಷಿಯಲ್ಲಿಪ್ಪ ಪೋಲೆಂಡ್ ಸರಕಾರವು ಸೂಯವಾಗಿ ರಷ್ಯಾದ ಅಭಿವಾದುಕೆ ಮಿತ್ರರು ಭಾಗಿದಂತೆ ಕಂಡುಬರುತ್ತಿದೆ. ಈ ಯುದ್ಧೆಯ ಹುಟ್ಟಿರನ ಗುಪ್ತಾಸ್ತ್ರಗಳ ಪರೀಕ್ಷಾ ಪ್ರಯೋಗವು ನಡೆಯುತ್ತಿರುವದಾಗಿ ವರದಿಗಳು ತಿಳಿಸುತ್ತವೆ. 'ವಿ-2' ಗಾಳಿಪ್ರದಲ್ಲಿ ಒಹಾ ರೀತಿಯ ಸುಧಾರಣೆಗಳನ್ನು ಮಾಡಿ ಅದರ ಯಶಸ್ವಿತೆಯ ಪರೀಕ್ಷೆ ಮಾಡುತ್ತಿರುವರಂತೆ.

ರಣಕ್ಷೇತ್ರದ ಈ ಕೋಲಾಹಲದ ಮಧ್ಯೆ ಇಂಗ್ಲೆಂಡಿನಲ್ಲಿ ಜುನಾವಣೆಯ ಗೊಂದಲವೊಂದು ಎದ್ದಿದೆ. ದೂವ ಹಕ್ಷದವರು ಒಹುವಾತಪಡೆದು ಯೂಪ ರೀತಿಯ ನೀತಿ ಜಾರಿಗೆ ಬರುವದೋ ಹೇಳಲು ಸಾಧ್ಯವಿಲ್ಲ. ಈ ಜುನಾವಣೆಯ ಬಗ್ಗೆ ಕೇವಲ ನಗೆಯಿಂದ ಚರ್ಚಿಲ್ಲರು ತಮ್ಮ ಮೊತನ್ನು ಕಾಯ್ದಿಸಿದ್ದಾರೆ. ಇದೊಂದು ಪರೀಕ್ಷಾಸಮಯವಾಗಿ ಪರಿಣಮಿಸಿದೆ. ಈ ಜುನಾವಣೆಯ ಫಲಿತಾಂಶದಿಂದ ಯುದ್ಧದ ಬಗ್ಗೆ ಬ್ರಿಟಿಷರ ನೀತಿಯು ಬದಲಾಗವದು ಸಾಧ್ಯವಿಲ್ಲದಿದ್ದರೂ, ತಮ್ಮ ಸಾಮ್ರಾಜ್ಯದಲ್ಲಡಗಿದ ವಸಾಹತುಗಳ ಒಗ್ಗೆ ನೀತಿ ಬದಲಾದೀತೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಮಾಲ್‌ಹೌಸ್ ಎಂಬಲ್ಲಿ ಮಿತ್ರರಿಗೆ ಒಂದು ದೊಡ್ಡ ಜಯವು ಜರ್ಮನಿಯಲ್ಲಿ ದೊರೆಯಿತು. ಇಲ್ಲಿ ಜರ್ಮನರು ಗನಿಗಳಲ್ಲಿ ಅಡಗಿಸಿದ್ದ ಒಂದು ನೂಯಟನ್ ಬಂಗಾರದ ಗಟ್ಟಿ, ಮಿತ್ರರಿಗೆ ಸಿಕ್ಕಿದಯಂತೆ. ಇದಲ್ಲದೆ 3 ದಶಲಕ್ಷ ಮಾರ್ಕುಗಳ ನೋಟುಗಳು, 2 ದಶಲಕ್ಷ ಅಮೇರಿಕನ್ ಡಾಲರುಗಳು 100 ದಶಲಕ್ಷ ಫ್ರೆಂಚ್ ಫ್ರಾಂಕುಗಳು, 110,000 ಬ್ರಿಟಿಷ್ ಪೌಂಡುಗಳು ದೊರೆತಿವೆಯಂತೆ. ಬಂಗಾರವನ್ನು ಒಂದೊಂದು ಬೀಲದಲ್ಲಿ 25 ಪೌಂಡುಗಳಂತೆ 4000 ಬೀಲಗಳಲ್ಲಿ ತುಂಬಿಸಿಟ್ಟಿದ್ದರಂತೆ. ಈ ಬಂಗಾರದ ಬೆಲೆ 13 ದಶಲಕ್ಷ ಪೌಂಡುಗಳೆಂದು ಅಂದಾಜು ಮಾಡಲಾಗಿದೆ. ಈ ಅಂಕೆಸಂಖ್ಯೆಗಳು ಸತ್ಯವಾದರೆ ಇವು ಜರ್ಮನಿಯು ಆಸಹಾಯಸ್ಥಿತಿಯನ್ನು ತೋರಿಸುವವೇ?

ಇತ್ತ ಪೂರ್ವಭಾಗದಲ್ಲಿ ಅಂದರೆ ಜಪಾನಿನ ಬಗ್ಗೆ ಹೆಚ್ಚಿನ ವಾರ್ತೆಗಳೇ ದೊರೆಯವು. ಜಪಾನರ ಮಂತ್ರಿಮಂಡಲ ಬದಲಾಯಿತು. ಅದು ಬದಲಾಗುವಾಗ ಜಪಾನರು ಸಂಧಿನೂಡಿಕೊಳ್ಳವಪೇರಿಬೇಕೆಂದು ಅನೇಕರು ಅಭಿಪ್ರಾಯ ವ್ಯಕ್ತಮಾಡಿದ್ದರು. ಆದರೆ ಕೇವಲ ಯುದ್ಧವೇ ತಮ್ಮ ಜೀವಾಳವೆಂಬುದನ್ನು ಈ ಮಂತ್ರಿಮಂಡಲವು ವ್ಯಕ್ತಪಡಿಸಿದೆ. ದನ್ನ ಕಳೆದಂತೆ ಮಿತ್ರದಂಡುಗಳು ಜಪಾನಿನ ಹತ್ತಿರ ಬರತೊಡಗಿವೆ. ಜನರಲ್ ಮೇಕಾರ್ಥರ್‌ರವರು ಕ್ರಮಶಃ ಒಂದೊಂದಾಗಿ ದ್ವೀಪಗಳನ್ನು ವಶಪಡಿಸಿಕೊಳ್ಳುತ್ತಾ ಫಿಲಿಪ್ಪೈನ್ ದ್ವೀಪಸಮೂಹವನ್ನು ಮುಗಿಸಲಿದ್ದಾರೆ. ಬರ್ಮಾದಲ್ಲಿ ಮಿತ್ರರು ಮಾಂಡಲೆಯನ್ನು ದಾಟಿ ಸಾಗತೊಡಗಿದ್ದಾರೆ. ಇದೆಲ್ಲವನ್ನೂ ಜಪಾನು ನೆಟ್ಟ ದೃಷ್ಟಿಯಿಂದ ನೋಕ್ಷಿಸುತ್ತಿದೆ. ಯಾವ ಕಡೆ ಯಾವ ಸಮಯದಲ್ಲಿ ಬೇಳಬಹುದೆಂಬುದನ್ನು ಹೇಳಬರುವಂತಿಲ್ಲ.

The Canara Banking Corporation Limited.

(Incorporated in British India Liablity of Members is Limited)

21) ESTD—1906.

Head Office: UDIPI, South Kanara.

Authorised Capital	.... Rs.	25,00,000
Issued & Subscribed Capital	.... Rs.	16,00,000
Paid up capital	.... Rs.	14,92,000
Reserves	.... Rs.	4,43,000

Total Working Capital Exceeds:
ONE CRORE & 35 LAKHS.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತ್ತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

25) ಪಿ. ಬಿ. ನಂ. 337, ಮದ್ರಾಸು.

ಎಂಪ್ಲೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

10) ಸ್ಥಾಪನೆ:—೧೮೯೭.

ಶತಸೇವಾರ್ಹಕವ ರ್ಷಿಕ ಬಡಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ		೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ವಿಮೆ		೧೬,೪೯,೪೮,೦೦೦ ,,
	ಆಸ್ತಿ	....	೬,೩೦,೪೬,೦೦೦ ,,
ಕಂಪನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು			೮,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಪಿಸ್ತಾ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್‌ಬಿಲ್ಡಿಂಗ್ ಬೋಂಬೆ

"ಟ್ರಾಪಿಕಲ್"

ಶ್ರೀ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್ ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ, ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾಕಾಲದಲ್ಲಿ ಜೀವವಿಮೆಯೇ ನಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ವಾಸ್ತ್ಯ ಖಚೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ರಿಕಾ ಬರೆಯಿರಿ:

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,

7) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,060, ಜಮಾ ಬಂದ ಠೇವಣಾತಿ 2,24.750 ವಸೂಲಾದ ಕ್ಲೇಮುನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟು ಪಾವತಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ ೧—೪—೦. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ರೂಸ್ವೆಲ್ಟರ ನಿಧನ.

ಜಗತ್ತಿನ ಮಹಾತ್ರಿಮೂರ್ತಿಗಳಲ್ಲಿ ಒಬ್ಬರೂ, ಅಮೇರಿಕದ ಅಧ್ಯಕ್ಷರೂ ಆಗಿದ್ದ ರೂಸ್‌ವೆಲ್ಟರು ತಾ. 12-4-45 ರಲ್ಲಿ ಜಾರ್ಜಿಯದ ವಾರ್ಮ್‌ಸ್ಪ್ರಿಂಗ್ ಎಂಬಲ್ಲಿ ವಿಧಿವಶರಾದರು. ಅಧ್ಯಕ್ಷ ರೂಸ್‌ವೆಲ್ಟರು ತಮ್ಮ ವಿಪರೀತ ಕೆಲಸಗಳ ಮಧ್ಯೆ ಒಂದು ವಾರದ ಜೆ ತೆಗೆದುಕೊಂಡು ವಾರ್ಮ್‌ಸ್ಪ್ರಿಂಗ್‌ನಲ್ಲಿ ಇದ್ದರು. ಇವರು ಸಾಯುವಾಗ ಇವರಿಗೆ 63 ವರ್ಷಗಳ ವಯಸ್ಸಾಗಿತ್ತು. 1882 ರಲ್ಲಿ ಜನಿಸಿದ ಇವರು 1907 ರಲ್ಲಿ ವಕೀಲವೃತ್ತಿಯನ್ನು ವಲಂಬಿಸಿ 1910 ರಲ್ಲಿ ನ್ಯೂಯಾರ್ಕ್ ಸಿನೇಟಿಗೆ ಆರಿಸಲ್ಪಟ್ಟರು. 1913 ರಲ್ಲಿ ಅಧ್ಯಕ್ಷ ವಿಲ್ಸನರು ಇವರನ್ನು ವಾಶಿಂಗ್‌ಟನ್ನಿನಲ್ಲಿ ನೌಕಾ ಇಲಾಖಾ ಕಾರ್ಯದರ್ಶಿಯ ಸಹಾಯಕರಾಗಿ ನೇಮಿಸಿದರು. 1919 ರಲ್ಲಿ ಯೂರೋಪಿನಲ್ಲಿದ್ದ ಅಮೇರಿಕನ್ ಸೇನೆಗಳನ್ನು ರದ್ದುಗೊಳಿಸುವ ಕಾರ್ಯದ ಮೇಲ್ವಿಚಾರಣೆ ವಹಿಸಿದ್ದರು. 1921 ರಲ್ಲಿ ಒಮ್ಮೆ ಸಮುದ್ರದಲ್ಲಿ ಆತಿ ಶೀತಳ ನೀರಿಗೆ ಬಿದ್ದು ಎದ್ದವರು ಮನೆಬಳಿ ಹರಡಿದ ಕಾಡ್ಗಿಚ್ಚನ್ನು ಕೆಡಿಸಲು ಹೋಗಿ ದಣಿದು ಮಲಗಿದರು. ಏಳುವಾಗ ಬಲಗಾಲು ವಾತದಿಂದ ಅಚಲವಾಗಿತ್ತು. 8 ವರ್ಷಗಳ ಕಾಲ ನಡೆದರು ಲಾಗದೆ ಇದ್ದರು. ಮುಂದಾದರೂ ಈ ಕಾಲು ಪೂರ್ಣ ಗುಣವಾಗಲಿಲ್ಲ. 1928 ರಲ್ಲಿ ನ್ಯೂಯಾರ್ಕಿನ ಗವರ್ನರಾಗಿ ಆರಿಸಲ್ಪಟ್ಟರು. 1933 ರಲ್ಲಿ ವಿಯೂವಿ ಎಂಬಲ್ಲಿ ಒಬ್ಬ ಇಟಲಿಯನು ಇವರ ಪ್ರಾಣ ಹರಣಕ್ಕೆ ಎತ್ನಿಸಿದ್ದನು. 1932 ರಲ್ಲಿ ಇವರು ಅಮೇರಿಕದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಆಗಿದ್ದ ಅಮೇರಿಕದ ಆರ್ಥಿಕ ಬಿಕ್ಕಟ್ಟನ್ನು ಬಿಡಿಸಲು ಇವರು ತಂದ ಹೊಸ ಯೋಜನೆಯು ಹೆಸರಿಸಲ್ಪಟ್ಟಿದೆ. ರೂಸ್‌ವೆಲ್ಟರು ನಂತರದ ಮೂರು ಚುನಾವಣೆಗಳಲ್ಲಿ ಅಮೇರಿಕದ ಅಧ್ಯಕ್ಷರಾಗಿ ಆರಿಸಿಬಂದರು. 'ಭಾಷಣ, ಅನ್ನ, ಆರಾಧನೆ, ಭಯ' ಈ ನಾಲ್ಕು ಸ್ವಾತಂತ್ರ್ಯವು ಮನುಷ್ಯನಿಗಿರಬೇಕೆಂದೂ, ಅದನ್ನು ಗೆಡ್ದು ಕೊಡುವದೇ ಅಮೇರಿಕದ ಧ್ಯೇಯವೆಂದೂ ಇವರು ಸಾರಿದ್ದರು.

ಯುದ್ಧದ ಕಡೇ ಅಂಕವು ನಡೆಯುತ್ತಿರುವ ಈ ಕಾಲದಲ್ಲಿ ಅದ ಇವರ ನಿಧನದಿಂದ ಮಿತ್ರರಾಷ್ಟ್ರಗಳಿಗೆ ದೊಡ್ಡ ಧಕ್ಕೆಯಾಯಿತೆನ್ನಬಹುದು. ಇವರ ನಿಧನದಿಂದ ಶಾಂತಿಯ ಹಾಗೂ ವಿಜಯದೆ ದಿನಗಳು ದೂರವಾದಂತಾಗಿದೆ. ಈ ಸಂದರ್ಭದಲ್ಲಿ ಫ್ಯಾಸಿಸ್ಟರೂ ವಿವಿಧ ದೇಶಗಳಲ್ಲಿ ಅಂತಃಕಲಹ ತಂದು, ಮಿತ್ರರಾಷ್ಟ್ರಗಳ ಐಕ್ಯತೆ ಮುರಿದುಬೆಳೆಸಬಹುದು.

ಮಹಾಯುದ್ಧ ಪ್ರಾರಂಭವಾದಂದಿನಿಂದ ರೂಸ್‌ವೆಲ್ಟರ ಹೆಸರು ಜನರ ನಿತ್ಯಜೀವನದಲ್ಲಿ ವ್ಯಾಪಿಸುವಷ್ಟು ಸರ್ವವ್ಯಾಪಿಯಾಗಿತ್ತು. ಯೂರೋಪಿನ ಯುದ್ಧವನ್ನು ಇಡೀ ಜಗತ್ತನ್ನೇ ಬೇರೆಮಾಡಿ ದೃಷ್ಟಿಸಿದ್ದಾಗ ಅವನ್ನು ಹತೋಟಿಗೆ ತಂದು ೩೦ ದಿನ ವಿಜಯದ ಗುರಿಯ ಹಕ್ಕರ ತರುವಲ್ಲಿ ರೂಸ್‌ವೆಲ್ಟರ ಕೈವಾಡವು ಕೆಲಿದಾಗಿರಲಿಲ್ಲ. ಇವರು ತಮ್ಮ ಜೀವಮಾನದಲ್ಲಿ ಅಕ್ಯುಚ್ಛ ಮೂದರಿಯನ್ನು ಜಗತ್ತಿಗೆ ಸಾರಿದ್ದಾರೆ. ಅವರು ಘೋಷಿಸಿದ ಚತುಸ್ವಾತಂತ್ರ್ಯಗಳು ಕನ್ನಡಿಯ ಗಂಟಿನಂತೆ ತೋರಿದರೂ ಅವುಗಳಲ್ಲಿ ತತ್ವವಿದೆ; ಭವಿಷ್ಯದ ಶಾಂತಿಯು ಅವುಗಳಲ್ಲೇ ಅಡಗಿದೆ. ಮಿತ್ರರಾಷ್ಟ್ರಗಳಿಗೆ ಇವರ ನಿಧನದಿಂದ ತುಂಬಲಾರದ ನಷ್ಟವಾಗಿದೆ. ಶತ್ರುರಾಷ್ಟ್ರಗಳೂ ಕೂಡ ಇವರ ಹೆಗ್ಗಳಿಕೆಯನ್ನು ಪ್ರಸಂಶಿಸಿದರೂ ಈ ನಿಧನದಿಂದ ಯುದ್ಧರಂಗದ ಮೇಲೆ ದೊಡ್ಡ ಪ್ರಭಾವ ಬೀಳದಿರದು. ರೂಸ್‌ವೆಲ್ಟರು ಸಾರಿದ ಉದಾತ್ತತತ್ವಗಳನ್ನು ಕಾರ್ಯತಃ ಜಾರಿಯಲ್ಲಿ ಕಾಂದರೆ ಮಿತ್ರರಾಷ್ಟ್ರಗಳು ಈ ಗಣನೀಯ ವ್ಯಕ್ತಿಗೆ ಯೋಗ್ಯಸ್ಮಾರಕವನ್ನು ರಚಿಸಿದಂತಾಗುವದು.

ಹೊಸ ಅಧ್ಯಕ್ಷರು.

ರೂಸ್‌ವೆಲ್ಟರ ನಿಧನದ ೮೩ ನಿಮಿಷಗಳಲ್ಲಿ ವೈಸ್‌ಪ್ರೆಸಿಡೆಂಟರಾಗಿದ್ದ ಮಿ. ಟ್ರೂಮೆನ್‌ರವರು ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾಗಿ ರಾಜ್ಯಾಂಗ ನಿಯಮದಂತೆ ಅಧಿಕಾರ ಸ್ವೀಕಾರ ಮಾಡಿದರು. ಅಧಿಕಾರ ವಹಿಸಿಕೊಂಡ ಕೂಡಲೇ ಟ್ರೂಮೆನ್‌ರವರು ಹೀಗೆ ಹೇಳಿದರು. 'ಅಧ್ಯಕ್ಷ ರೂಸ್‌ವೆಲ್ಟರು ಯಾವ ರೀತಿ ಕೆಲಸ ನಡೆಸುತ್ತಿದ್ದರೆಂಬುದಾಗಿ ನಾನು ನಂಬುತ್ತೇನೆಯೋ ಅದೇ ರೀತಿಯಲ್ಲಿ ನಾವು ನಮ್ಮ ಕೆಲಸ ನಡೆಸಿಕೊಂಡು ಹೋಗಬೇಕು. ಆ ಭಾವನೆಯಿಂದಲೇ ನಾನು ಅದೇ ಮಂತ್ರಿಮಂಡಳವನ್ನು ಉಳಿಸಿಕೊಂಡು ಕಾರ್ಯಪ್ರವರ್ತನಾಗುತ್ತೇನೆ.'

ಸ್ಯಾನ್ ಫ್ರಾನ್ಸಿಸ್ಕೋ.

ಈಗ ಜರಗುವ ಸ್ಯಾನ್ ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ಖರ್ಚು ಅಮೇರಿಕಾಕ್ಕೆ 9,00,000 ಆಗುತ್ತದಂತೆ. ಅಂದರೆ ಈಗಿನ ಯುದ್ಧದ 35 ನಿಮಿಷದ ಖರ್ಚು ಎಂದಂತಾಯಿತು.

ಸ್ಯಾನ್ ಫ್ರಾನ್ಸಿಸ್ಕೋ ಸಮ್ಮೇಳನವು ಅಪಜಯವಾದರೆ ಆದು ಮೂರನೇ ಯುದ್ಧಕ್ಕೆ ಪೀಠಿಕೆಯೆಂದು ಬ್ರಿಟನಿನಲ್ಲಿರುವ ಭಾರತೀಯ ಕಾಂಗ್ರೆಸ್ಸಿನವರ ಅಭಿಪ್ರಾಯವಾಗಿದೆ.

ಈಗ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಸೇರುವ ಸಮ್ಮೇಳನವು ಸರಕಾರದ ಸಮ್ಮೇಳನವೇ ಹೊರತು ಪ್ರಜೆಗಳ ಸಮ್ಮೇಳನವಲ್ಲವೆಂದು ಬೊಂಬಾಯಿಯ ಶ್ರೀ ಮಸಾನಿಯವರು ಹೇಳಿರುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.